**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 17/2025**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಾಬಾ ಅಮೀರ್ |
| ತಂದೆಯ ಹೆಸರು | : | ಇಮಾಮ ಬಂಟವಾಳ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಬಟ್ಟೆ ಅಂಗಡಿ |
| ವಾಸ್ತವ್ಯ | : | ಹೆಬ್ಳೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/06/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 27.11.2024 ರಂದು ರಂಗಿನ ಕಟ್ಟಾ ಹತ್ತಿರ ಸುಮಾರು ಸಂಜೆ 5.00 ಗಂಟೆಗೆ ನನ್ನ ಅಣ್ಣ ರಸ್ತೆ ದಾಟುವಾಗ ಹೊನ್ನಾವರ ಕಡೆಯಿಂದ ಬಂದ ಬೈಕ್ ಸವಾರನ್ನು ನನ್ನ ಅಣ್ಣನಿಗೆ ಬಡಿದು ಅಪಘಾತವಾಗಿತ್ತು. ನಾನು ಸದರಿ ಅಪಘಾತ ನೋಡಿದ್ದು ಇರುವುದಿಲ್ಲ. ಪರಿಚಯದವರು ಸದರಿ ವಿಷಯ ತಿಳಿಸಿದ್ದು ನಾನು ಸ್ಥಳಕ್ಕೆ ಬಂದಿರುತ್ತೇನೆ. ಸದರಿ ಅಪಘಾತದಲ್ಲಿ ನನ್ನ ತಲೆಗೆ ಪೆಟ್ಟು ಆಗಿತ್ತು. ಅವರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಯುನಿಟಿ ಆಸ್ಪತ್ರೆ, ಮಂಗಳೂರಿಗೆ ಕರೆದುಕೊಂಡು ಹೋಗಿದ್ದು ಇರುತ್ತದೆ. ರಾತ್ರಿ 10.00 ಗಂಟೆ ಸುಮಾರಿಗೆ ಮಂಗಳೂರಿನ ಆಸ್ಪತ್ರೆಯ ವೈದ್ಯರು ನನ್ನ ಅಣ್ಣ ಮೃತರಾದ ಬಗ್ಗೆ ತಿಳಿಸಿದ್ದು ಇರುತ್ತದೆ. ಅಪಘಾತ ಪಡಿಸಿದ ವಾಹನ ಹಿರೋಹೊಂಡಾ ಕಂಪನಿಯ ಬೈಕ್ ಆಗಿದ್ದು ಅದರ ನಂಬರ್ ಕೆಎ 47 ಆಗಿದ್ದು ಸರಿಯಾಗಿ ನಂಬರ್ ನೆನಪಿಲ್ಲ. ನಂತರ ಮಾರನೇಯ ದಿನ ಬಂದು ನಾನು ಠಾಣೆಯಲ್ಲಿ ದೂರು ನೀಡಿದ್ದು ಇರುತ್ತದೆ. ಸದರಿ ಅಪಘಾತ ಬೈಕ್ ಸವಾರನ ಅತಿವೇಗ ಹಾಗೂ ಅಜಾಗರೂಕತೆಯಿಂದ ಆಗಿರುತ್ತದೆಂದು ಕೇಳಿ ತಿಳಿದುಕೊಂಡಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ –1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ  ಎಮ್ ಹೆಚ್ ಎನ್ ವಕೀಲರಿಂದ,</u>**

ಅಪಘಾತ ದಲ್ಲಿ ಮೃತರಾದವರು ನನ್ನ ಸ್ವಂತ ಅಣ್ಣ ಆಗಿರುವುದಿಲ್ಲ.  ಅಪಘಾತವಾದ ಬಗ್ಗೆ ನನಗೆ ಪೇಂಟಿಂಗ್ ಕೆಲಸ ಮಾಡುವ ಅರ್ಷದ್ ಎಂಬುವವರು  ಫೋನ್ ಕರೆಯನ್ನು ಮಾಡಿರುತ್ತಾರೆ. ದೂರನ್ನು  ಪೊಲೀಸರು  ನಾನು ಹೇಳಿದಂತೆ ಬೆರಳಚ್ಚು ಮಾಡಿರುತ್ತಾರೆ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರೆಯಲು ಬರುತ್ತದೆ. ದೂರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.  ಅಪಘಾತವನ್ನು ನಾನು ನನ್ನ ಕಣ್ಣಾರೆ ನೋಡಿದ್ದು ಇರುವುದಿಲ್ಲ. ವೈಯಕ್ತಿಕವಾಗಿ ನನಗೆ  ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ ಆದರೆ ಹೇಳಿದ್ದನ್ನು ಕೇಳಿ ಆರೋಪಿಯ ತಪ್ಪಿನಿಂದ  ಅಪಘಾತ ಆಗಿದೆ ಎಂದು ಹೇಳುತ್ತಿದ್ದೇನೆ .  ಸದರಿ ಅಪಘಾತ ನನ್ನ ಅಣ್ಣ ಒಂದೇ ಸಲಕ್ಕೆ ರಸ್ತೆ ದಾಟಿದ್ದ ಕಾರಣ ಅವರ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆರೋಪಿಯ ನಿಧಾನವಾಗಿ ಬೈಕನ್ನು ರಸ್ತೆಯಲ್ಲಿ ಚಲಾಯಿಸುತ್ತಾ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣ ರಸ್ತೆಯನ್ನು ಯಾವ ದಿಕ್ಕಿನಿಂದ ದಾಟುತ್ತಿದ್ದರು ಎಂದು ಹೇಳಲು ಬರುವುದಿಲ್ಲ . ಮೃತರ ಕುಟುಂಬಕ್ಕೆ ಪರಿಹಾರ ಸಿಗಲೆಂದು ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಸದರಿ  ಅಪಘಾತ ನನ್ನ ಅಣ್ಣನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ದೂರನ್ನು ದಾಖಲಿಸಲು ಒಂದು ದಿನ ತಡವಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**